ಓ.ಎಸ್. ನಂ. 49/2022
ಪಿ.ಡಬ್ಲ್ಯೂ- 1

(ಇಂದು ದಿಃ 19-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)
**ಪಾಟೀ ಸವಾಲು :- ಶ್ರೀ.SSA ವಕೀಲರಿಂದ :-**

1 ನೇ ಪ್ರತಿವಾದಿ ದಾವಾ ಸ್ವತ್ತನ್ನು 15 ಲಕ್ಷಕ್ಕೆ ಮಾರಾಟ ಮಾಡಲು ನನ್ನ ಜೊತೆ ಮಾತನಾಡಿ ಒಪ್ಪಿಕೊಂಡಿದ್ದರು ಎಂದರೆ ಸರಿ. ನಂತರ 15 ಲಕ್ಷ ಕಡಿಮೆ ಆಗುತ್ತದೆ ಇನ್ನೂ ಹೆಚ್ಚಿನ ಹಣ ಕೊಟ್ಟು ಖರೀದಿ ತೆಗೆದುಕೊಳ್ಳಿ ಎಂದು ಪ್ರತಿವಾದಿ ಕೇಳಿದಾಗ ನಾನು ಆ ಬಗ್ಗೆ ಆಮೇಲೆ ಚರ್ಚೆ ಮಾಡೋಣ ಈಗ ಅಗ್ರಿಮೆಂಟ ಬರೆದುಕೊಡಿ ಎಂದು ಕೇಳಿದ ಮೇರೆಗೆ ದಿಃ 02-04-2020 ರಂದು ಅಗ್ರಿಮೆಂಟ ಬರೆದುಕೊಟ್ಟರು ಆದರೆ ಸದರಿ ಅಗ್ರಿಮೆಂಟನ ಸಂಗತಿಗಳು 1 ನೇ ಪ್ರತಿವಾದಿಗೆ ತಿಳಿದಿರಲಿಲ್ಲ ಎಂದರೆ ಸರಿಯಲ್ಲ. ಆದಿನ 5 ಲಕ್ಷ ಮುಂಗಡ ಹಣ ಪಡೆದುಕೊಂಡು ಸದರಿ ಅಗ್ರಿಮೆಂಟ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ತದನಂತರ 1 ನೇಪ್ರತಿವಾದಿ ಹೆಚ್ಚಿನ ಹಣಕ್ಕೆ ಮಾರಾಟ ಮಾಡುವ ಬಗ್ಗೆ ಮಾತುಕತೆ ಮಾಡೋಣ ಎಂದು ನನ್ನ ಬಳಿ ಬಂದಾಗ ನಾನು ಈ ಹಿಂದೆಬರೆದುಕೊಟ್ಟರು ಅಗ್ರಿಮೆಂಟ ಪ್ರಕಾರ ಖರೀದಿ ಪತ್ರ ನೋಂದಣಿ ಮಾಡಿಕೊಡಿ ಎಂದು ಕೇಳಿದಾಗ ವಾದಿ ನಾನು ಹೆಚ್ಚಿನ ಹಣಕ್ಕೆ ದಾವಾ ಸ್ವತ್ತನ್ನು ಬೇರೆಯವರಿಗೆ ಮಾರಾಟ ಮಾಡಿ ನಿಮ್ಮ 15 ಲಕ್ಷ ಹಣ ಪಡೆದುಕೊಳ್ಳಿ ಎಂದು ಹೇಳಿದರು ಎಂದರೆ ಸರಿಯಲ್ಲ. ಕಾರಣ 1 ನೇಪ್ರತಿವಾದಿ ಮತ್ತು ಅವರಗಂಡ ದಾವಾ ಜಮೀನನು 2 ನೇ ಪ್ರತಿವಾದಿಗೆ ಮಾರಾಟ ಮಾಡಲು ಮಾತುಕತೆ ಮಾಡಿ ಒಟ್ಟು 94 ಲಕ್ಷ 64 ಸಾವಿರಕ್ಕೆ ಬೆಲೆ ನಿಗದಿ ಮಾಡಿ ದಿಃ 28-12-2020 ರಂದು 10 ಲಕ್ಷ 50 ಸಾವಿರ ಮುಂಗಡ ಹಣ ಪಡೆದುಕೊಂಡು ಅಗ್ರಿಮೆಂಟ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸದರಿ ಅಗ್ರಿಮೆಂಟ ಆಗುವಾಗ ಈ ಹಿಂದೆ ವಾದಿ ಜೊತೆ ಆಗಿದ್ದ ಅಗ್ರಿಮೆಂಟ ಬಗ್ಗೆ ಮತ್ತು ಅವರಿಗೆ 15 ಲಕ್ಷ ಕೊಡಬೇಕಿರುವ ಬಗ್ಗೆ 1 ನೇ ಪ್ರತಿವಾದಿ 2 ನೇ ಪ್ರತಿವಾದಿಗೆ ತಿಳಿಸಿದರು ಎಂದರೆ ಸರಿಯಲ್ಲ. ಎಲ್ಲಾ ಸಂಗತಿಗಳು ನನಗೆ ಗೊತ್ತಿದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇವತ್ತಿಗೂ 1 ನೇ ಪ್ರತಿವಾದಿ 2 ನೇ ಪ್ರತಿವಾದಿಯಿಂದ ಬಾಕಿ ಕ್ರ ಯಕ ಹಣ ಪಡೆದುಕೊಂಡು ನಮ್ಮಿಂದ ಪಡೆದಿರು15 ಲಕ್ಷ ವಾಪಸ್ಸು ಕೊಡಲು ಸಿದ್ದರಿದ್ದಾರೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(2 ನೇ ಪ್ರತಿವಾದಿ ಪರ ಶ್ರೀ TVP ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲಿಗೆ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಸೇಡಂ.